# GEETANJALI CREDIT AND CAPITAL LIMITED

**(CIN- L21012KA1990PLC143422)**
**2, "Shreedhar Krupa", Shreedhar Tutorials of Commerce, II**
**Main, II Cross, Vidyagiri, Dharwad, Karnataka – 580004.**
**Email id- geetanjalicreditandcapital@gmail.com Website- www.geetanjalicreditcapital.com**
**Phone: +91-9314711545**


---

**Date: 10/02/2025**

**To,**
**The BSE Limited**
**Phiroze Jeejeebhoy Towers,**
**Dalal Street**
**Mumbai 400 001**

**Ref: Script Code: 539486**

**Sub: Newspaper Publication**

**Dear Sir/Ma'am,**

As per Regulation 30 and 47 of SEBI (LODR) Regulation, 2015 we hereby inform you that the Company has published the Unaudited Financial Result for the Period ended 31.12.2024 in the Newspaper named Prajavahini and The South India Times published dated 9th February 2025.

The copies of the Newspaper is attached herewith.

Kindly take on your records.

Yours faithfully,

**For, Geetanjali Credit and Capital Limited**

VITTHAL KUMAR JAJOO
Digitally signed by VITTHAL KUMAR JAJOO
Date: 2025.02.10 14:35:58 +05'30'

**Vitthal Kumar Jajoo**
**Managing Director**
**(DIN: 03245882)**

# GEETANJALI CREDIT AND CAPITAL LIMITED

(CIN- L21012KA1990PLC143422)

2, "Shreedhar Krupa", Shreedhar Tutorials of Commerce, II Main, II Cross, Vidyagiri, Dharwad, Karnataka-580004. • Email id: geetanjalicreditandcapital@gmail.com
Website: www.geetanjalicreditcapital.com • Phone: +91-9314711545

**STATEMENT OF STANDALONE UNAUDITED FINANCIAL RESULTS FOR THE QUARTER ENDED ON 31ST DECEMBER, 2024**

Based on the recommendations of the Audit Committee and the Board of Directors at their respective Meetings held on 07th February, 2025. approved the standalone unaudited financial results for the quarter ended 31st December, 2024 along with Limited Review Report as required under Regulation 33 of SEBI (Listing Obligations & Disclosure Requirements) Regulations, 2015. The result is also available on the websites of the Stock Exchange(s) and the listed entity at https://www.geetanjalicreditcapital.in/financial-result.html


Scan the QR code to view the Financial results on the website of the company

For and on behalf of
**GEETANJALI CREDIT AND CAPITAL LIMITED**
Sd/- Vitthal Kumar Jajoo
Managing Director (DIN : 03245882)

Place : Hubli, Karnataka
Date : 07/02/2025


# ರೈತರ ಸಮಸ್ಯೆ ಮೊದಲು ಪರಿಹರಿಸಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ : ಡಾ.ರಂಗನಾಥ್

• ಪ್ರಜಾವಾಹಿನಿ–ಕುಣಿಗಲ್




ವಿವಿಧ ಗ್ರಾಮಗಳ ರೈತಾಪಿ ಜನರು ತಮ್ಮ ಜಮೀನುಗಳ ಸಮಸ್ಯೆ ಹಾಗೂ ತಮ್ಮ ಊರುಗಳ ರಸ್ತೆ ಹಾಗೂ ನೀರು ಸೇರಿದಂತೆ ವಿವಿಧ ಸಮಸ್ಯೆಗಳನ್ನು ಬಗೆಹರಿಸುವಂತೆ ಶಾಸಕ ಡಾ. ರಂಗನಾಥ್ ಅವರಿಗೆ ಮನವಿ ಸಲ್ಲಿಸಿದರು.

ತಾಲೂಕಿನ ಕಸಬಾ ಹೋಬಳಿ ಮೋದೂರು ಗ್ರಾಮದಲ್ಲಿ ಶಾಸಕರ ವಿನೂತನ ಕಾರ್ಯಕ್ರಮವಾದ ನಮಸ್ತೆ ಕುಣಿಗಲ್ ಶಾಸಕರ ನಡೆ ಹಳ್ಳಿಯ ಕಡೆ ಎಂಬ ಕಾರ್ಯಕ್ರಮದಲ್ಲಿ ವಿವಿಧ ಭಾಗಗಳಿಂದ ಆಗಮಿಸಿದ್ದ ಗ್ರಾಮೀಣ ಪ್ರದೇಶದ ಜನರು ಶಾಸಕರಿಗೆ ಮನವಿ ನೀಡಿ ತಮ್ಮ ಸಮಸ್ಯೆಗಳ ಬಗ್ಗೆ ಅವಲತ್ತುಕೊಂಡರು.

ರೈತಾಪಿ ಜನರ ಸಮಸ್ಯೆಗಳನ್ನು ಆಲಿಸಿದ ಶಾಸಕ ಡಾ. ರಂಗನಾಥ್ ರೈತರ ಮೂಲ ಹಾಗೂ ಸುಮ್ಮನೆ ತಾಲೂಕು ಕಚೇರಿಗೆ ಸುತ್ತುತ್ತಿರುವಂತಹ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ಕೊಡುವಂತೆ ತಹಸೀಲ್ದಾರ್ ಮತ್ತು ತಾಲೂಕು ಮಟ್ಟದ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಹಲವು ರೈತರು ದೂರುತ್ತ ಮೋದೂರು ಸರ್ವೆ ನಂಬರ್ 12 ರಲ್ಲಿ 300 ಎಕರೆ ಜಮೀನಿದ್ದು ಅದರಲ್ಲಿ ಗ್ರಾಮದ ಬಹುತೇಕ ರೈತರು ಬಗರ್ ಹುಕ್ಕುಂ ಸಮಿತಿಗೆ ಅರ್ಜಿ ಸಲ್ಲಿಸಿ ಉಳುಮೆ ಮಾಡಿಕೊಂಡು ಬರುತ್ತಿದ್ದೇವೆ, ಕೆಲವರಿಗೆ ಮುಂಜೂರಾಗಿದೆ. ಕೆಲವರಿಗೆ ಮಂಜೂರಾಗಿರುವುದಿಲ್ಲ.

ಡೀಮ್ಡು ಫಾರೆಸ್ಟ್ ಗುರುತಿಸುವಾಗ ರೈತರ ಜಮೀನುಗಳನ್ನು ಗುರುತಿಸದೆ ರೈತರಿಗೆ ಅನ್ಯಾಯ ಮಾಡಿದ್ದಾರೆ. ನಮಗೆ ನ್ಯಾಯ ಕೊಡಿಸಿ ಎಂದು ಶಾಸಕರಲ್ಲಿ ಮನವಿ ಮಾಡಿದರು.

ಶಾಸಕರು ಸ್ಥಳದಲ್ಲಿದ್ದ ತಹಸೀಲ್ದಾರ್ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿ ಜಂಟಿ ಸರ್ವೆ ಮಾಡಿ ಸಮಸ್ಯೆ ಬಗೆಹರಿಸಲು ಸೂಚಿಸಿದರು. ಕೆಲವು ಗ್ರಾಮಸ್ಥರು ಚಿರತೆಯ ಕಾಟ ಹೆಚ್ಚಾಗಿದೆ. ಜನರು ರಾತ್ರಿ ಆದರೆ ಭಯ ಬೀಳುತ್ತಿದ್ದಾರೆ ಎಂದರೆ, ಕೆಲವರು ಗ್ರಾಮದಲ್ಲಿ ವಿದ್ಯುತ್ ಸಮಸ್ಯೆ ಉಂಟಾಗಿದೆ, ಸರಿಪಡಿಸಿ ಎಂದರು.

ಕೆಲವರು ಹಕ್ಕುಪತ್ರಗಳಿದ್ದರೂ ಪಂಚಾಯಿತಿಯಲ್ಲಿ ಖಾತೆ ಮಾಡಿಕೊಡುತ್ತಿಲ್ಲ ಎಂದಾಗ ಸಮಸ್ಯೆ ಬಗೆಹರಿಸಲು ಅಧಿಕಾರಿಗಳಿಗೆ ಸೂಚಿಸಿದ ಶಾಸಕರು ಜನರ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಪಂದಿಸಿ ಕೆಲಸ ಮಾಡಬೇಕು. ಸರ್ಕಾರಕ್ಕೆ ಕೆಟ್ಟ ಹೆಸರು ತರುವಂತ ಕೆಲಸ ಬೇಡ ಒಳ್ಳೆಯದನ್ನು ಮಾಡಿ ಎಂದರು. ತಾಲೂಕಿಗೆ ಹೇಮಾವತಿ ನೀರು ಬರುವುದನ್ನು ವಿರೋಧ ಪಕ್ಷಗಳು ವಿರೋಧ ಮಾಡುತ್ತಿದ್ದಾರೆ. ನೀವು ಮಾತ್ರ ಸುಮ್ಮನಿದ್ದೀರಿ, ತಾಲೂಕಿನ ಎಲ್ಲ ಕೆರೆಗಳು ತುಂಬಿದ ಮೇಲೆ ಹೇಮಾವತಿ ನೀರು ಮಾಗಡಿಗೆ ಹೋದರೆ ತಪ್ಪೇನು. ನಮ್ಮಂತೆ ಅವರು ಮನುಷ್ಯರಲ್ಲವೇ ಕುಣಿಗಲ್‌ಗೆ ಬರುವ ನೀರನ್ನು ಏಕೆ ವಿರೋಧಿಸುತ್ತಿದ್ದೀರಿ ಎಂದು ಸಿಡಿಮಿಡಿಗೊಂಡರು.

ತಹಶೀಲ್ದಾರ್ ರಶ್ಮಿ ಅವರು ಮಾತನಾಡುತ್ತಾ ಸರ್ಕಾರದ ಆದೇಶದ ಮೇರೆಗೆ ಇಡೀ ರಾಜ್ಯದ ಕಂದಾಯ ಇಲಾಖೆಯಲ್ಲಿ ಸಮಗ್ರ ಬದಲಾವಣೆ ಮಾಡುತಿದ್ದು ಅದೇ ರೀತಿ ತಾಲೂಕು ಕಚೇರಿಯಲ್ಲಿಯೂ ಕ್ರಮ ಕೈಗೊಂಡಿದ್ದು ಯಾವುದೇ ಸಾರ್ವಜನಿಕರು ತಮ್ಮ ದಾಖಲಾತಿಗಳಿಗೆ ಅಲೆದಾಡದೆ ಶೀಘ್ರವಾಗಿ ತಮ್ಮ ಯಾವುದೇ ಬೋಧಕಲೆಗಳನ್ನು ಇ ಆಫೀಸ್ ಮೂಲಕ ಪಡೆದುಕೊಳ್ಳುವ ವ್ಯವಸ್ಥೆ ಮಾಡಲಾಗುತ್ತಿದ್ದು ಬಹುತೇಕ ರೈತಾಪಿ ಜನರ ಅಲೆದಾಟ ತಪ್ಪಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾ.ಪಂ.ಇ.ಒ. ನಾರಾಯಣ, ಗ್ರಾ ಪಂ ಅಧ್ಯಕ್ಷೆ ಹೇಮಾಬಾಯಿ, ಉಪಾಧ್ಯಕ್ಷ ಬೋರೇಗೌಡ, ಅರಣ್ಯಾಧಿಕಾರಿ ಜಗದೀಶ್, ಗ್ರಾಮ ಪಂಚಾಯತಿ ಸದಸ್ಯರಾದ ಸುರೇಶ್, ದೀಪಕ್, ತಿರುಮಲೇಗೌಡ, ಬಸವರಾಜು, ಗಂಗಾಧರ್ ಮುಂತಾದವರು ಹಾಜರಿದ್ದರು.

# ಹಳೆಯ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯಕ್ರಮ

• ಪ್ರಜಾವಾಹಿನಿ–ಚಾಮರಾಜನಗರ



ತಾಲ್ಲೂಕಿನ ಬಾಗಳಿ ಗ್ರಾಮದ ಹಳೆಯ ವಿದ್ಯಾರ್ಥಿಗಳ ಬಳಗದ ವತಿಯಿಂದ ಗುರುವಂದನಾ ಕಾರ್ಯಕ್ರಮವನ್ನು ಇಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಆಯೋಜನೆ ಮಾಡಲಾಯಿತು.

ಉದ್ಘಾಟನೆ ಮಾಡಿ ಮಾತನಾಡಿದ ಶಿಕ್ಷಕ ಶ್ರೀನಿವಾಸ್ (ಹಳೆಯ ವಿದ್ಯಾರ್ಥಿ) ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಸೂಕ್ತ ಮಾರ್ಗದರ್ಶನ ನೀಡುವುದೇ ನಮ್ಮ ಸೌಭಾಗ್ಯ ಎಂದರು.

ನಾನು ಈ ಗ್ರಾಮದಲ್ಲಿ ಹುಟ್ಟಿ ಬೆಳೆದು ಹತ್ತಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ನೀಡುವುದೇ ನನ್ನ ಸೌಭಾಗ್ಯ ಹಾಗೂ ನನ್ನ ತಾಯಿ ನೆಲೆಗೆ ಗುರುವಿನ ಕಾಣಿಕೆ ಇಂದಿನ ಮರೆಯಲಾಗದ ಕಾಣಿಕೆ ಎಂದರೆ ತಪ್ಪಾಗಲಾರದು ಎಂದರು. ವಿದ್ಯಾರ್ಥಿಗಳಿಗೆ ಶಿಕ್ಷಣದ ಸಂಸ್ಕೃತಿ ನೀಡುವುದಕ್ಕೆ ಚಿರಋಣಿಯಾಗಿರುತ್ತಾನೆ.

ದೇವರ ಕಾಣುವ ಮಾರ್ಗದಲ್ಲಿ ಗುರುಗಳನ್ನ ಕಾಣುತ್ತೇನೆ ಎಂದರು. ಈ ಬಳಿಕ ಅಂತರ ರಾಷ್ಟ್ರೀಯ ಕೋಕೋ ಕ್ರೀಡಾಪಟು ಚೈತ್ರ ಮಾತನಾಡಿ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಕ್ರೀಡೆಯನ್ನು ಬೆಳೆಸಿಕೊಳ್ಳಬೇಕು ಎಂದರು. ನನ್ನ ತಂದೆ ತಾಯಿ ಹಾಗೂ ನನ್ನ ಪರಿಶ್ರಮದಿಂದ ಅಂತರರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿ ಭಾರತ ತಂಡವನ್ನು ಪ್ರತಿನಿಧಿಸುವ ಅವಕಾಶ ಕಲ್ಪಿಸಿಕೊಟ್ಟ ನನ್ನ ತಂದೆಯವರಾರಿಗೆ ಚಿರಋಣಿಯಾಗಿರುತ್ತಾನೆ ಹಾಗೂ ಗ್ರಾಮೀಣ ಪ್ರಾಂತದಲ್ಲಿ ಹುಟ್ಟಿ ಅಂತರಾಷ್ಟ್ರೀಯ ಮಟ್ಟಕ್ಕೆ ತಲುಪಿರುವುದೇ ನನ್ನ ಸೌಭಾಗ್ಯ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ನಿವೃತ್ತ ಶಿಕ್ಷಕರಾದ ಚೆನ್ನಕೇಶವ, ಮಂಜುಳ, ಪುಟ್ಟಣ, ಎಂ.ಕೆ ದಿನಕರ್, ಗುರುಸಿದ್ದಪ್ಪ ಹಾಗೂ ಬಾಗಳಿ ಪ್ರೌಢ ಶಾಲೆ ಮುಖ್ಯ ಶಿಕ್ಷಕರಾದ ಶಂಕರ್, ಶಿಕ್ಷಕ ಪ್ರಶಸ್ತಿ ವಿಜೇತ ಮಹೇಂದ್ರ ಪಾಟೀಲ್, ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಬಸವಣ್ಣ, ಕಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಲೋಕೇಶ್ ಹಾಗೂ ಬಾಗಳಿ ಮತ್ತು ಲಿಂಗಣಾಪುರ ಶಿಕ್ಷಕ ವೃಂದ ಮತ್ತು ಹಳೆಯ ವಿದ್ಯಾರ್ಥಿಗಳು ಮತ್ತು ಗ್ರಾ ಪಂ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಸಂಶೋಧನಾ ಕೇಂದ್ರ ಸ್ಥಾಪನೆ ವಿವಿ ಚರಿತ್ರೆಯಲ್ಲಿ ಮೈಲಿಗಲ್ಲು : ಪ್ರೊ.ನಿರಂಜನವಾನಳ್ಳಿ

• ಪ್ರಜಾವಾಹಿನಿ–ಕೋಲಾರ




ಸಂಶೋಧನಾ ಕೇಂದ್ರ ಸ್ಥಾಪನೆಯ ಮೂಲಕ ಸಂಶೋಧನಾರ್ಥಿಗಳಿಗೆ ಮಾರ್ಗದರ್ಶನ ಕಾರ್ಯಾಗಾರ ಹಮ್ಮಿಕೊಂಡಿರುವುದು ಬೆಂಗಳೂರು ಉತ್ತರ ವಿವಿ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲು ಎಂದು ವಿವಿಯ ಕುಲಪತಿ ಪ್ರೊ.ನಿರಂಜನ ವಾನಳ್ಳಿ ತಿಳಿಸಿದರು.

ಬೆಂಗಳೂರು ಉತ್ತರ ವಿವಿ ಟಮಕದ ಆಡಳಿತ ಕಚೇರಿಯಲ್ಲಿ ವಿವಿಯ ಸಂಶೋಧನಾ ಕೇಂದ್ರದಿಂದ ಪಿಹೆಚ್‌ಡಿ ಸಂಶೋಧನಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಮೊದಲ ಓರಿಯಂಟೇಷನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

ಉತ್ತರ ವಿವಿಯಿಂದ ಪಿಹೆಚ್‌ಡಿ ಹಾಗೂ ಸಂಶೋಧನಾ ಕೇಂದ್ರ ಆರಂಭಿಸುವ ಕುರಿತು ಇದ್ದ ವಿಘ್ನಗಳು ಕಡೆಗೂ ನಿವಾರಣೆಯಾಗಿದ್ದು, ಇದೀಗ ಕೇಂದ್ರ ಆರಂಭಗೊಂಡಿದ್ದು, ಅದಕ್ಕೆ ನೂತನ ಅಧ್ಯಕ್ಷರಾಗಿ ಪ್ರೊ.ವೇಣುಗೋಪಾಲ್ ಅವರನ್ನು ನೇಮಿಸಲಾಗಿದ್ದು, ಪಿಹೆಚ್‌ಡಿ ಶಿಕ್ಷಣಾರ್ಥಿಗಳಿಗೆ ಇದರಿಂದ ಅನುಕೂಲವಾಗಲಿದೆ ಎಂದು ತಿಳಿಸಿದರು.

ಸಂಶೋಧನಾರ್ಥಿಗಳಿಗೆ ವಿವಿಯಿಂದ ಅವಕಾಶ ನೀಡುವ ಮೂಲಕ ವಿವಿ ಸ್ನಾತಕ, ಸ್ನಾತಕೋತ್ತರ ಪದವಿಗಳ ಜತೆಗೆ ಪಿಹೆಚ್‌ಡಿ ಮಾಡುವ ಅವಕಾಶ ಕಲ್ಪಿಸಿದ್ದು, ಪೂರ್ಣಪ್ರಮಾಣದಲ್ಲಿ ಕಾರ್ಯಾರಂಭ ಮಾಡಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಉತ್ತರ ವಿವಿ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡುತ್ತಿದ್ದು, ಯಾವುದೇ ಸಮಸ್ಯೆಗಳಿಗೆ ಅವಕಾಶ ನೀಡದೇ ಪಾರದರ್ಶಕತೆ ಕಾಪಾಡಿಕೊಂಡು ಬಂದಿದೆ, ವಿವಿಯಲ್ಲಿ ಶೈಕ್ಷಣಿಕ ಪ್ರಗತಿಗೆ ಒತ್ತು ನೀಡಲಾಗಿದ್ದು, ಎಲ್ಲರ ಸಹಕಾರ ಕೋರಿದರು.

ಇದರೊಂದಿಗೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವಿವಿ ವ್ಯಾಪ್ತಿಯ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ನೀಡಲು ನಡೆಸಿದ ಪ್ರಯತ್ನದಲ್ಲಿ ಇಂಡಿಯಾ ಫಾರ್ ಐಎಎಸ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿರುವಂತೆ ಇದೀಗ ಎಲ್ಲ ವಿದ್ಯಾರ್ಥಿಗಳಿಗೆ ದೈನಂದಿನ ವಿಶೇಷಗಳನ್ನು ಸಂಗ್ರಹಿಸಿ ಕಳಿಸುವ ಕೆಲಸಕ್ಕೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

ಇದು ವಿದ್ಯಾರ್ಥಿ ಸಮುದಾಯದಲ್ಲಿ ಹೊಸ ನಿರೀಕ್ಷೆ ಮೂಡಿಸಿದೆ ಎಂದು ತಿಳಿಸಿದರು. ಈ ಒಪ್ಪಂದದಿಂದಾಗಿ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಇಚ್ಛಿಸುವ ಬೆಂಗಳೂರು ಉತ್ತರ ವಿವಿಯ ಎಲ್ಲಾ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳಿಗೆ ಈ ಉಚಿತ ಕೋಚಿಂಗ್ ಸೌಲಭ್ಯ ಸಿಗುತ್ತಿರುವುದು ಸಂತಸದ ವಿಷಯವಾಗಿದೆ ಎಂದರು.

ಇಂಡಿಯಾ ಫಾರ್ ಐಎಎಸ್ ಸಂಸ್ಥೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ನೀಡಲಿದ್ದು, ಕಲಿಕೆಗೆ ಅಗತ್ಯವಾದ ಪಠ್ಯವಸ್ತು, ಕಲಿಕಾ ಮೆಟೀರಿಯಲ್‌ಅನ್ನು ಆನ್‌ಲೈನ್ ಮೂಲಕ ವಿದ್ಯಾರ್ಥಿಗಳಿಗೆ ತಲುಪಿಸಲಾಗುತ್ತಿದೆ ಎಂದು ತಿಳಿಸಿದರು.

ಇದೀಗ ವಿವಿಯಲ್ಲಿ ಸಂಶೋಧನಾ ಕಾರ್ಯಕ್ಕೂ ಒತ್ತು ನೀಡಿದ್ದು, ಕೇಂದ್ರಕ್ಕೆ ನೂತನ ಅಧ್ಯಕ್ಷರಾಗಿ ಪ್ರೊ. ವೇಣುಗೋಪಾಲ್ ನನಗೆ ಅಧ್ಯಕ್ಷ ಸ್ಥಾನ ನೀಡಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು.

ಈ ಸಂದರ್ಭದ ಕುಲಸಚಿವರಾದ ಸಿ.ಎನ್. ಶ್ರೀಧರ್, ಮೌಲ್ಯಮಾಪನ ಕುಲಸಚಿವ ಪ್ರೊ. ಕೆ.ತಿಪ್ಪೇಸ್ವಾಮಿ,ವಿವಿಯ ಹಣಕಾಸು ಅಧಿಕಾರಿ ವಸಂತ ಕುಮಾರ್, ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ಪ್ರೊ. ಕುಮುದ. ಸಿಂಡಿಕೇಟ್ ಸದಸ್ಯರಾದ ನಿರುಪ್,ಜೈದೀಪ್ ಮತ್ತಿತರರಿದ್ದರು.

# ಶಾಸಕರ ಪುತ್ರ ಸುನೀಲ್ ನಂಜೇಗೌಡ ಭರ್ಜರಿ ಗೆಲುವು

• ಪ್ರಜಾವಾಹಿನಿ–ಮಾಲೂರು





ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷದ ಯುವ ಘಟಕಕ್ಕೆ ನಡೆದ ಚುನಾವಣೆಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಕೆ.ಎನ್.ಸುನೀಲ್ ನಂಜೇಗೌಡ 2ನೇ ಸ್ಥಾನದಲ್ಲಿ ಭರ್ಜರಿಯಾಗಿ ಜಯಗಳಿಸಿರುವುದು ಸಂತಸ ತಂದಿದೆ ಎಂದು ಶಾಸಕ ಕೆ ವೈ ನಂಜೇಗೌಡ ಹೇಳಿದರು.

ತಾಲ್ಲೂಕಿನ ಕೊಮ್ಮನಹಳ್ಳಿ ಗ್ರಾಮದ ನಿವಾಸದಲ್ಲಿ ಕಾಂಗ್ರೆಸ್ ಪಕ್ಷದ ರಾಜ್ಯ ಯುವ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ತಮ್ಮ ಪುತ್ರನಿಗೆ ಸಿಹಿ ತಿನ್ನಿಸುವ ಮೂಲಕ ಶುಭ ಹಾರೈಸಿ ಮಾತನಾಡಿದರು.

ಕರ್ನಾಟಕ ರಾಜ್ಯ ಯುವ ಕಾಂಗ್ರೆಸ್ ಪಕ್ಷದ ವಿವಿಧ ಪದಾಧಿಕಾರಿಗಳಿಗೆ ನಡೆದ ಚುನಾವಣೆಯ ಫಲಿತಾಂಶವನ್ನು ಎಐಸಿಸಿ ಪ್ರಕಟಿಸಿದ್ದು, ಅದರಂತೆ 101 ಪದಾಧಿಕಾರಿಗಳ ಪೈಕಿ ನನ್ನ ಪುತ್ರ ಸುನೀಲ್ ನಂಜೇಗೌಡ 60 ಸಾವಿರ 31 ಮತಗಳನ್ನು ಪಡೆದು 2ನೇ ಸ್ಥಾನದಲ್ಲಿ ಜಯಗಳಿಸಿರುವುದು ಸಂತಸ ತಂದಿದೆ.

ನಾನು ಸಹ ತಾಲ್ಲೂಕಿನಲ್ಲಿ ರಾಜಕಾರಣವನ್ನು ಯುವ ಕಾಂಗ್ರೆಸ್‌ನಿಂದಲೇ ಪ್ರಾರಂಭಿಸಿದ್ದು, ನನ್ನ ಮಗ ಸುನೀಲ್‌ಗೆ ರಾಜಕೀಯದಲ್ಲಿ ಉತ್ತಮ ಭವಿಷ್ಯ ಇದ್ದ ಕಾರಣ ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿ 2ನೇ ಸ್ಥಾನದಲ್ಲಿ ಜಯಗಳಿಸಿದ್ದಾರೆ. ಮೊದಲನೇ ಸ್ಥಾನದಲ್ಲಿ ಸಚಿವ ಜಾರಕಿಹೊಳಿ ಪುತ್ರ ಜಯಗಳಿಸಿದ್ದು ರಾಜ್ಯ ಯುವ ಕಾಂಗ್ರೆಸ್ ಪಕ್ಷಕ್ಕೆ ಆಯ್ಕೆಯಾಗಿರುವ ಪದಾಧಿಕಾರಿಗಳ ಮೇಲೆ ಕಾಂಗ್ರೆಸ್ ಪಕ್ಷ ಕಟ್ಟುವ ಜವಾಬ್ದಾರಿ ಹೆಚ್ಚಾಗಿದೆ.

ಹಿರಿಯರ ಮಾರ್ಗದರ್ಶನದಲ್ಲಿ ಹಿರಿಯರು ಯುವಕರು ಪಕ್ಷದ ಕಾರ್ಯಕರ್ತರು ನನ್ನ ಪುತ್ರನ ಗೆಲುವಿಗೆ ಶ್ರಮವಹಿಸಿದ್ದು, ಎಲ್ಲರಿಗೂ ಅಭಿನಂದನೆಗಳು ಸಲ್ಲಿಸುವುದಾಗಿ ಹೇಳಿದ ಅವರು ಕಾಂಗ್ರೆಸ್ ಪಕ್ಷದಲ್ಲಿ ತಾಳ್ಮೆ ಹಾಗೂ ನಿಷ್ಠೆ ಬಹಳ ಮುಖ್ಯ ಎರಡನ್ನು ಒಟ್ಟಿಗೆ ತೆಗೆದುಕೊಂಡು ಪಕ್ಷ ಕಟ್ಟುವ ಕೆಲಸದಲ್ಲಿ ತೊಡಗಿಸಿಕೊಂಡರೆ ಪಕ್ಷದಲ್ಲಿ ಮತ್ತಷ್ಟು ಅವಕಾಶಗಳು ಸಿಗುತ್ತದೆ ಎಂದು ಸುನೀಲ್ ನಂಜೇಗೌಡ ಅವರಿಗೆ ಶುಭ ಹಾರೈಸುವುದಾಗಿ ಹೇಳಿದರು.


ರಾಜ್ಯ ಯುವ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ ಸುನೀಲ್ ನಂಜೇಗೌಡ ಮಾತನಾಡಿ, ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಪಕ್ಷದ ಶಾಸಕರ ಸಹಕಾರ ಹಾಗೂ ಯುವಕರ ಪಕ್ಷದ ಮುಖಂಡರು ಕಾರ್ಯಕರ್ತರ ಸಹಕಾರದಿಂದ ಯುವ ಕಾಂಗ್ರೆಸ್ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಎರಡನೇ ಸ್ಥಾನದಲ್ಲಿ ಆಯ್ಕೆಯಾಗಿದ್ದು, ಕಳೆದ ಆರು ವರ್ಷಗಳಿಂದ ನಮ್ಮ ತಂದೆಯವರಾದ ಶಾಸಕ ಕೆ ವೈ ನಂಜೇಗೌಡ ಅವರ ಆಶೀರ್ವಾದ ಮಾರ್ಗದರ್ಶನದಂತೆ ತಾಲೂಕಿನಲ್ಲಿ ಕಾಂಗ್ರೆಸ್ ಪಕ್ಷ ಕಟ್ಟುವ ಕೆಲಸ ಮಾಡಲಾಗುತ್ತಿದ್ದು, ಪ್ರಸ್ತುತ ನನ್ನನ್ನು ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿದ್ದು, ರಾಜ್ಯ ರಾಜಕಾರಣಕ್ಕೆ ಪಾದಾರ್ಪಣೆಗೆ ಅವಕಾಶ ಮಾಡಿದ್ದು, ಸಂತಸ ತಂದಿದೆ ಹಾಗೂ ಜವಾಬ್ದಾರಿಯು ಹೆಚ್ಚಾಗಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ ಕೆ ಶಿವಕುಮಾರ್ ಹಾಗೂ ಗೃಹಮಂತ್ರಿ ಡಾ.ಜಿ.ಪರಮೇಶ್ವರ್ ಅವರ ಮಾರ್ಗದರ್ಶನದಂತೆ ರಾಜ್ಯ ಯುವ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಪದಾಧಿಕಾರಿಗಳೊಂದಿಗೆ ಚರ್ಚಿಸಿ ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಹೆಚ್ಚಿನ ಸಂಖ್ಯೆಯಲ್ಲಿ ಯುವಕರನ್ನು ಕಾಂಗ್ರೆಸ್ ಪಕ್ಷಕ್ಕೆ ಸೆಳೆಯುವ ಮೂಲಕ ಅವರ ಸದಸ್ಯತ್ವವನ್ನು ಮಾಡಿಸಿ ಪಕ್ಷವನ್ನು ಕಟ್ಟುವ ಕೆಲಸ ಮಾಡಲಾಗುವುದು ಎಂದರು.

ಯುವ ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳ ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಸುನೀಲ್ ನಂಜೇಗೌಡ ಅವರು ಎರಡನೇ ಸ್ಥಾನದಲ್ಲಿ ಜಯಗಳಿಸಿದ ಹಿನ್ನೆಲೆಯಲ್ಲಿ ಅವರ ಅಭಿಮಾನಿಗಳು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸ್ನೇಹಿತರು ಕೊಮ್ಮನಹಳ್ಳಿ ಗ್ರಾಮಕ್ಕೆ ಆಗಮಿಸಿ ಸಿಹಿ ಹಂಚಿ ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದರು.

ಈ ಸಂದರ್ಭದಲ್ಲಿ ಜಿ ಪಂ ಮಾಜಿ ಅಧ್ಯಕ್ಷೆ ರತ್ನಮ್ಮ ನಂಜೇಗೌಡ, ಮುಖಂಡರಾದ ಕ್ಷೇತ್ರನಹಳ್ಳಿ ವೆಂಕಟೇಶ್ ಗೌಡ, ಬನಹಳ್ಳಿ ಸತೀಶ್, ಶೆಟ್ಟಹಳ್ಳಿ ರಾಮಮೂರ್ತಿ, ಕೆ.ವೈ. ಈರಣ್ಣ, ವಿಜಿ , ನಾಗೇಶ್, ಯರ್ರಪಶೆಟ್ಟಹಳ್ಳಿ ಶ್ರೀನಿವಾಸ್, ಅಭಿ, ಮಣಿಶೆಟ್ಟಹಳ್ಳಿ ನವೀನ್, ಸೇರಿದಂತೆ ಅಪಾರ ಅಭಿಮಾನಿಗಳು ಸ್ನೇಹಿತರು, ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಅಗಮಿಸಿ ಶುಭಾ ಹಾರೈಸಿದರು.

# ಐಶ್ವರ್ಯಾ ಗೌಡ ವಿರುದ್ಧ ಮತ್ತೊಂದು ಎಫ್‌ಐಆರ್

• ಪ್ರಜಾವಾಹಿನಿ–ಬೆಂಗಳೂರು



ಮಾಜಿ ಸಂಸದ ಡಿ.ಕೆ. ಸುರೇಶ್ ಅವರ ಸಹೋದರಿ ಎಂದು ಕೋಟ್ಯಾಂತರ ರೂ. ವಂಚಿಸಿದ ಆರೋಪ ಎದುರಿಸುತ್ತಿರುವ ಐಶ್ವರ್ಯಾ ಗೌಡ ವಿರುದ್ಧ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.


ಅಕ್ರಮವಾಗಿ ಹಲವು ವ್ಯಕ್ತಿಗಳ ಫೋನ್ ಕರೆ ದಾಖಲೆಗಳನ್ನು ಪಡೆದುಕೊಂಡಿರುವ ಆರೋಪ ಐಶ್ವರ್ಯಾ ಗೌಡ ವಿರುದ್ಧ ಕೇಳಿ ಬಂದಿದ್ದು, ಖುದ್ದು ಪ್ರಕರಣದ ತನಿಖಾಧಿಕಾರಿಯಾಗಿರುವ ಎಸಿಪಿ ಭರತ್ ರೆಡ್ಡಿ ಅವರು ನೀಡಿರುವ ದೂರಿನ ಮೇರೆಗೆ ಬ್ಯಾಟರಾಯನಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವಂಚನೆ ಪ್ರಕರಣ ದಾಖಲಾಗುತ್ತಿದ್ದಂತೆ ಐಶ್ವರ್ಯಾ ಗೌಡ ಅವರ 5 ಹಾಗೂ ಅವರ ಪತಿಯ 2 ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದಿದ್ದ ಪೊಲೀಸರು, ಅವುಗಳಲ್ಲಿದ್ದ ಡೇಟಾ ಸಂಗ್ರಹಣೆಗಾಗಿ ನ್ಯಾಯಾಲಯದ ಅನುಮತಿ ಪಡೆದು ಪಶ್ಚಿಮ ವಿಭಾಗದ ಸಿಇಎನ್ ಠಾಣೆಗೆ ರವಾನಿಸಿದ್ದರು. ಆ ಫೋನ್‌ಗಳಲ್ಲಿರುವ ಡೇಟಾವನ್ನು ಸಂಗ್ರಹಿಸಿದಾಗ ಅದರಲ್ಲಿ ಹಲವು ವ್ಯಕ್ತಿಗಳ ಸಿಡಿಆರ್ ವಿವರಗಳು ಪತ್ತೆಯಾಗಿವೆ. ಫೋನ್ ಕರೆ ದಾಖಲೆಗಳು ಖಾಸಗಿಯಾಗಿದ್ದು, ಸಾಮಾನ್ಯವಾಗಿ ಅಪರಾಧ ಪ್ರಕರಣಗಳ ತನಿಖೆ ನಡೆಸುವಾಗ ತನಿಖಾ ಸಂಸ್ಥೆ ಅಥವಾ ತನಿಖಾಧಿಕಾರಿಗಳು ಮಾತ್ರವೇ ಅಗತ್ಯತೆ ಅನುಸಾರ ಅವುಗಳನ್ನು ಪಡೆದುಕೊಳ್ಳುವ ಅವಕಾಶ ಹೊಂದಿರುತ್ತಾರೆ ಎಂದು ಎಫ್‌ಐಆರ್ ದಾಖಲಾಗಿದೆ.

ಆದರೆ ಆರೋಪಿ ಐಶ್ವರ್ಯಾ ಗೌಡ ಅಕ್ರಮವಾಗಿ ಅನೇಕ ವ್ಯಕ್ತಿಗಳ ಸಿಡಿಆರ್ ಪಡೆದುಕೊಂಡಿರುವುದು ಬಯಲಾಗಿದೆ. ಆದ್ದರಿಂದ ಐಶ್ವರ್ಯಾ ಗೌಡ ಹಾಗೂ ಆಕೆಗೆ ಸಿಡಿಆರ್ ನೀಡಿರುವ ತನಿಖಾ ಸಂಸ್ಥೆಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರು ನೀಡಲಾಗಿದೆ ಎಂದು ವರದಿಯಾಗಿದೆ.

# ಸಾಧನೆಗಾಗಿ ಪ್ರತಿ ಕ್ಷಣವೂ ಅಮೂಲ್ಯ : ನಾಗೇಂದ್ರಪ್ರಸಾದ್

• ಪ್ರಜಾವಾಹಿನಿ–ಕೋಲಾರ



ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ನಿಮ್ಮ ಶೈಕ್ಷಣಿಕ ಜೀವನದ ಮೊದಲ ಹಂತದಲ್ಲಿ ಸಾಧನೆ ಮಾಡಲು ನಿರಂತರ ಅಧ್ಯಯನ ಅತಿ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರತಿ ಕ್ಷಣವೂ ಅಮೂಲ್ಯ ಎಂದು ಅರಿತು ಅಭ್ಯಾಸ ಮುಂದುವರೆಸಿ ಎಂದು ಎಸ್‌ಎಸ್‌ಎಲ್‌ಸಿ ನಿವೃತ್ತ ಜಿಲ್ಲಾ ನೋಡಲ್ ಅಧಿಕಾರಿ ಎ.ಎನ್. ನಾಗೇಂದ್ರಪ್ರಸಾದ್ ಕರೆ ನೀಡಿದರು.

ತಾಲ್ಲೂಕಿನ ಅಮ್ಮನಲ್ಲೂರು ಚೌಡೇಶ್ವರಿ ಅನುದಾನಿತ ಪ್ರೌಢಶಾಲೆಯಲ್ಲಿ 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಲಿಕೆಯಲ್ಲಿ ಶಿಸ್ತು ಇರಬೇಕು. ಶಾಲೆ, ಮನೆಯಲ್ಲಿ ಕಾಲಹರಣ ಮಾಡಬಾರದು ಎಂದು ಸಲಹೆ ನೀಡಿದರು.

ಬರವಣಿಗೆ ಉತ್ತಮಪಡಿಸಿಕೊಳ್ಳಿ, ಮೌಲ್ಯಮಾಪನ ಮಾಡುವವರಿಗೆ ನಿಮ್ಮ ಬರವಣಿಗೆ ಆಕರ್ಷಣೀಯವಾಗಿದ್ದರೆ ಅಂಕ ನೀಡುವ ಮನಸ್ಸು ಇರುತ್ತದೆ. ಆರೋಗ್ಯದ ಕಡೆ ಗಮನ ನೀಡಿ, ಮುರುಕುಲು ತಿಂಡಿ, ಎಣ್ಣೆಯಿಂದ ಕರಿದ ಪದಾರ್ಥ ತಿನ್ನದಿರಿ, ಪರೀಕ್ಷೆ ಮುಗಿಯುವವರೆಗೂ ಎಚ್ಚರವಹಿಸಿ ಗೈರು ತಪ್ಪಿಸಿ ಎಂದರು.

ಅನ್ವಯಿಕ ಪ್ರಶ್ನೆಗಳಿಗೆ ಸುಲಭವಾಗಿ ಉತ್ತರಿಸುವ ಮೂಲಕ ಶೇ.100 ಸಾಧನೆಗೆ ಪಠ್ಯ ಓದಿಗೆ ಒತ್ತು ನೀಡಿ, ಈಗಾಗಲೇ ಇಲಾಖೆಯಿಂದ ಮಾದರಿ ಪ್ರಶ್ನೆಪತ್ರಿಕೆ, ಪ್ರಶ್ನೋತ್ತರ ನೀಡಿದ್ದು, ಅದನ್ನು ನಿತ್ಯ ಬರೆದು ಅಭ್ಯಾಸ ಮಾಡಿ ಎಂದರು.

ಪ್ರಶ್ನೆಪತ್ರಿಕೆ ಯಾವುದೇ ರೀತಿ ಕೊಟ್ಟರೂ ನೀವು ಉತ್ತರಿಸಲು ಸಿದ್ದರಾಗಿರಬೇಕು, ಅದಕ್ಕೆ ಪರಿಶ್ರಮ ಅಗತ್ಯವಿದೆ, ವೇಳಾಪಟ್ಟಿ ಹಾಕಿಕೊಂಡು ಅಧ್ಯಯನ ಮಾಡಿ ಎಂದರು.

ಶಿಕ್ಷಕರ ಬೋಧನೆಯನ್ನು ಗಮನವಿಟ್ಟು ಕೇಳಿ, ಜತೆಗೆ ಪಠ್ಯಪುಸ್ತಕ ಓದುವ ಅಭ್ಯಾಸ ರೂಢಿಸಿಕೊಳ್ಳಿ, ಅನ್ವಯಿಕ ಪ್ರಶ್ನೆಗಳಿಗೆ ಉತ್ತರ ಬರೆಯಲು ಇದು ಹೆಚ್ಚು ಸಹಕಾರಿ ಎಂದು ತಿಳಿಸಿ, ಶೇ.100 ಸಾಧನೆಗೆ ಪಠ್ಯಪುಸ್ತಕ ಓದು ಅತಿ ಅವಶ್ಯ ಎಂದರು.

ಉತ್ತಮ ಬರವಣಿಗೆ ನಿಮ್ಮ ಸಾಧನೆಗೆ ಸ್ಫೂರ್ತಿಯಾಗಲಿದೆ, ವಿದ್ಯಾರ್ಥಿಗಳು ಬರವಣಿಗೆ ಉತ್ತಮಪಡಿಸಿಕೊಳ್ಳಲು ನಿರಂತರವಾಗಿ ಪಠ್ಯದಲ್ಲಿರುವುದನ್ನೇ ಬರೆದು ಅಭ್ಯಾಸ ಮಾಡಿ, ಬರವಣಿಗೆ ಉತ್ತಮವಾಗಿದ್ದರೆ ಮಾತ್ರ ಶೇ.100 ಅಂಕ ಪಡೆಯಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಶಿಕ್ಷಕರು ಕಲಿಕೆಯಲ್ಲಿ ಪ್ರಾಯೋಗಿಕ,ಕಲಿಕೋಪಕರಣ ಬಳಸಲು ಸೂಚಿಸಿದ ಅವರು, ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಕಡೆ ಹೆಚ್ಚಿನ ಗಮನ ನೀಡಿ ಎಂದು ತಿಳಿಸಿ, ಶಿಕ್ಷಕರ ಬೋಧನೆಯನ್ನು ಗಮನವಿಟ್ಟು ಕೇಳಿ, ತರಗತಿ ಕೊಠಡಿಯಲ್ಲಿ ನಿಮ್ಮ ಎಲ್ಲಾ ಆಲೋಚನೆ ಬದಿಗಿಡಿ, ಕೇವಲ ಶಿಕ್ಷಕರ ಮಾತು ಮಾತ್ರ ನಿಮ್ಮ ಕಿವಿಗೆ ಬೀಳುತ್ತಿರಬೇಕು ಅಂತಹ ಏಕಾಗ್ರತೆ ಸಾಧಿಸಿ ಎಂದರು.

ಏಕಾಗ್ರತೆ ಅತಿ ಮುಖ್ಯವಾಗಿದೆ, ಶಾಲೆಗೆ ಗೈರಾಗದಿರಿ, ಆರೋಗ್ಯ ರಕ್ಷಣೆಗೆ ಒತ್ತು ನೀಡಿ, ಪ್ರತಿ ನಿತ್ಯ ಎಷ್ಟು ಓದಬೇಕು ಎಂಬುದರ ವೇಳಾಪಟ್ಟಿ ಹಾಕಿಕೊಳ್ಳಿ ಎಂದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯಶಿಕ್ಷಕ ಮುನಿವೆಂಕಟಸ್ವಾಮಿ ಸೇರಿದಂತೆ ಎಲ್ಲಾ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.

# ಶ್ರೀ ರೇಣುಕಾ ಯಲ್ಲಮ್ಮ ದೇವಿ – ಶ್ರೀ ದ್ರೌಪತಮ್ಮ ದೇವಿ ಪ್ರತಿಷ್ಠಾಪನೆ

• ಪ್ರಜಾವಾಹಿನಿ–ಹೊಸಕೋಟೆ



ಹೊಸಕೋಟೆ ತಾಲೂಕಿನ ತಾವರೆಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಕಾಳಪ್ಪನಹಳ್ಳಿ ಗ್ರಾಮದಲ್ಲಿ ಶ್ರೀ ಎಲ್ಲಮ್ಮ ದೇವಿ ಮತ್ತು ಶ್ರೀ ದೌಪತಮ್ಮ ದೇವಿ ನೂತನ ಪ್ರತಿಷ್ಠಾಪನ ಹಾಗೂ ಕುಂಭಾಭಿಷೇಕ ಮಹೋತ್ಸವವನ್ನು ಶ್ರೀ ವಹ್ನಿಕುಲ ಕ್ಷತ್ರಿಯ ಗುರುಪೀಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಪ್ರಣವಾನಂದಪುರಿ ಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಕಾರ್ಯಕ್ರಮ ನಡೆಯಿತು. ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವರಿಗೆ ಶ್ರೀ ದ್ರೌಪತಮ್ಮ ದೇವರಿಗೆ ವಿಶೇಷ ಅಲಂಕಾರ ಮಹಾಮಂಗಳಾರತಿ ತೀರ್ಥಪ್ರಸಾದ ವಿನಿಯೋಗ ಅನ್ನ ಸಂತರ್ಪಣೆ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

ನಂತರ ಮಾತನಾಡಿದ ಸ್ವಾಮಿಗಳು ನಮ್ಮ ಹಿಂದೂ ಸಂಸ್ಕೃತಿ ಹಾಗೂ ಪರಂಪರೆಯನ್ನು ಬಿಂಬಿಸುವಲ್ಲಿ ದೇವಾಲಯಗಳ ಪಾತ್ರ ಬಹಳ ಮುಖ್ಯ. ಜನರು ನೆಮ್ಮದಿ ಮತ್ತು ಏಕಾಗ್ರತೆಗೆ ಬಯಸಿ ದೇವಾಲಯಗಳ ಕಡೆ ಬರುತ್ತಾರೆ ಎಂದು ತಿಳಿಸಿ ನೆರೆದಿದ್ದ ಭಕ್ತ ಸಮೂಹಕ್ಕೆ ಪ್ರವಚನ ನೀಡಿ ಆಶೀರ್ವಾದ ನೀಡಿದರು.

ಗ್ರಾಮದ ಮುಖಂಡರಾದ ಮುನಿರಾಜ್ ರವರು ಮಾತನಾಡಿ, ತುಂಬಾ ವರ್ಷಗಳ ಕನಸು ನನಸಾಗಿದೆ ಎಲ್ಲಾ ದಾನಿಗಳ ಸಹಾಯದಿಂದ ಆ ತಾಯಿ ಗುಡಿ ಕಟ್ಟುವುದಕ್ಕೆ ಜಗನ್ಮಾತೆ ನೆಲೆಸುವುದಕ್ಕೆ ಎಲ್ಲರ ಸಹಕಾರದಿಂದ ಇಲ್ಲಿ ವಿಜೃಂಭಣೆಯಿಂದ ಪೂಜಾ ಕಾರ್ಯಕ್ರಮ ನೆರವೇರಿದೆ. ನಮ್ಮ ಗುರುಗಳಾದ ಶ್ರೀ ಶ್ರೀ ಪ್ರಣವಾನಂದ ಸ್ವಾಮೀಜಿರವರ ನೇತೃತ್ವದಲ್ಲಿ, ಈ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಕುಂಭಾಭಿಷೇಕ ನೆರವೇರಿಸಿ ಕೊಟ್ಟಿದ್ದಾರೆ. ಶುಕ್ರವಾರ ನಾಡಿನ ಜನತೆಗೆ ತಾಯಿ ರೇಣುಕಾ ಯಲ್ಲಮ್ಮ ಹಾಗೂ ದ್ರೌಪತಮ್ಮ ತಾಯಿಯ ಆಶೀರ್ವಾದ ಇರಲಿ ಒಳ್ಳೆ ಮಳೆ ಬೆಳೆ ಕಾಲಕಾಲಕ್ಕೆ ಆಗಿ ತಾಯಿ ಇಲ್ಲಿ ನೆಲಸಿರುವುರಿಂದ ಮುಂದಿನ ದಿನಗಳಲ್ಲಿ ಕರಗ ಮಹೋತ್ಸವ ಪೂಜಾ ಕಾರ್ಯಕ್ರಮ ನಡೆಯುತ್ತದೆ.

ದೇವಾಲಯಕ್ಕೆ ಸ್ಥಳ ವನ್ನು ಕೊಟ್ಟಂತಹ ಊರಿನ ಗೌಡರಾದ ಕೃಷ್ಣಪ್ಪನವರು ಒಂದು ಕೋಟಿ ರೂ ಮೌಲ್ಯದ ಜಾಗವನ್ನು ದೇವಾಲಯಕ್ಕೆ ದಾನವಾಗಿ ಕೊಟ್ಟಿದ್ದಾರೆ. ಅವರ ಕುಟುಂಬಕ್ಕೆ ತಾಯಿ ಯಲ್ಲಮ್ಮ ದ್ರೌಪತಮ್ಮ ತಾಯಿ ಆಶೀರ್ವಾದ ಇರಲಿ, ಹಾಗೂ ಮೂರು ದಿನಗಳ ಕಾಲ ನಡೆದ ಪೂಜಾ ಕಾರ್ಯಕ್ರಮದಲ್ಲಿ ಎಲ್ಲಾ ಗ್ರಾಮಸ್ಥರು ಸೇರಿ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಿದರು, ಈ ಪೂಜಾ ಕಾರ್ಯಕ್ರಮದಲ್ಲಿ ಸಾವಿರಾರು ಭಕ್ತರು ಅನ್ನಪ್ರಸಾದ ಸ್ವೀಕರಿಸಿ ಶ್ರೀ ರೇಣುಕಾ ಯಲ್ಲಮ್ಮ ದೇವಿ, ಶ್ರೀ ದ್ರೌಪತಮ್ಮ ದೇವಿ, ದರ್ಶನ ಪಡೆದು ತೀರ್ಥ ಪ್ರಸಾದ ಸ್ವೀಕರಿಸಿ ದೇವರ ಕೃಪೆಗೆ ಪಾತ್ರರಾದರು. ಈ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರಿಗೆ ಸನ್ಮಾನಿಸಿ ಗೌರವಿಸಿದರು.

ಈ ಕಾರ್ಯಕ್ರಮವು ಬುಧವಾರದಿಂದ ಶುಕ್ರವಾರದವರೆಗೆ ಮೂರು ದಿನಗಳ ಕಾಲ ಶಾಸ್ತ್ರೋಕ್ತವಾಗಿ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮಕ್ಕೆ ಕಾಳಪ್ಪನಹಳ್ಳಿ, ಗೌಡರು ಯಜಮಾನರು ಗಣಾಚಾರಿಗಳು ಊರಿನ ಎಲ್ಲಾ ಗ್ರಾಮಸ್ಥರು ವನ್ನಿ ಕುಲಸ್ಥರು ಮತ್ತು ಮಂಚಪ್ಪನಹಳ್ಳಿ ಗ್ರಾಮಸ್ಥರು ಹಾಗೂ ಭಕ್ತಾದಿಗಳು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಹಾಜರಿದ್ದರು.



# High court order on MUDA case boost for Siddaramaiah ahead of Budget session

Bengaluru, Feb 8 (TSIT): The Karnataka High Court's decision on Friday to reject the petition seeking a Central Bureau of Investigation (CBI) probe into the alleged Mysuru Urban Development Authority (MUDA) scam is a significant boost for Chief Minister Siddaramaiah, who is named as accused number one in the case, ahead of the Budget session.

The verdict, which came amid the opposition BJP's taunts that his tenure will end by November, has provided him with much-needed relief and strengthened his position within the party.The decision also allows CM Siddaramaiah to face the opposition with confidence during the Budget session, expected to be held in the first week of March. The Congress-led government had faced allegations of cutting short the session's duration to avoid discussions on the MUDA scam.

The BJP, however, maintained that the High Court has not given CM Siddaramaiah a clean chit



or declared him innocent in the case. "I do agree that this verdict provides relief to CM Siddaramaiah. However, the charges against him still stand. We will wait for the Lokayukta report and proceed accordingly," BJP state President B.Y. Vijayendra said.

Commenting on the development, Home Minister G. Parameshwara stated that the High Court ruled in favour of the Lokayukta's investigation, deeming it appropriate for the MUDA case. Parameshwara, who is one of the most prominent leaders from the Dalit community and has been projected as a potential candidate for the CM's post in case of a leadership change, emphasised that there were no grounds to transfer the case to the CBI. "The court has placed its trust in the Lokayukta institution and issued its order accordingly," he said.

"The court's decision implies that the Lokayukta's investigation was conducted properly and that there is no reason to dismiss its findings. This is a positive verdict, and trust should be placed in the Lokayukta's investigation. When an institution conducts an inquiry, trust in its process is essential," he added.

# Insult to humanity: D K Shivakumar condemns 'shackling' of Indian deportees by US

Bengaluru, Feb 7 (TSIT): Karnataka Deputy Chief Minister D. K. Shivakumar on Friday criticised the "shackling" of Indian deportees by the US, saying it is an insult to humanity. Talking to the media in Kanakapura, Shivakumar said if someone is residing illegally in another country, they should face appropriate legal consequences, but shackling them like criminals is unacceptable and an insult to humanity. When asked about the state Budget preparations amid the



government's guarantee schemes, Shivakumar dismissed claims that these schemes are a financial burden."Who said guarantees are an economic burden? These schemes empower people and relieve financial strain. We have allocated Rs 250 crore per sector to strengthen the economy. A total of Rs 56,000 crore has been dedicated to these programmes, ensuring benefits for all sections of society," Shivakumar said. He added that the government is focused on the welfare of the hungry and the poor, and the Budget will be presented in the first week of March, with the exact date to be announced in a few days. Criticising the Union Budget, he remarked that it has "nothing" for Karnataka.

On former PM H. D. Deve Gowda's statement that his last wish is to ensure water supply to Bengaluru, Shivakumar responded, "Since becoming a minister, I have approved an additional 6 TMC of water for Bengaluru. This marks a new chapter in the city's history. Neither the BJP nor other coalition governments made such decisions."

# MFI Ordinance row: Stop making reckless quips, handle your dept, Ashoka tells Minister

Bengaluru, Feb 8 (TSIT): Coming down heavily on Congress leaders for criticising Governor Thaawar Chand Gehlot for not signing the Ordinance to regulate microfinancing institutions (MFIs) that have been harassing farmers, the Karnataka BJP on Saturday stated that instead of making reckless statements they should focus on managing their departments.

Minister for Agriculture N. Cheluvarayaswamy had stated that despite being in a Constitutional position, Governor Gehlot is acting like a spokesperson of the BJP.He had demanded that the Governor should not get influenced politically with regard to the Ordinance promulgated to prevent highhandedness of MFIs and give justice to the people.The Governor had refused to give consent for the Karnataka Micro Loan and Small Loan (Prevention of Coercive Actions) Ordinance, 2025. Reacting to the development, the Leader of the Opposition in the Legislative Assembly, R. Ashoka rapped Minister Cheluvarayaswamy for his comments against the




Governor and stated that "Since the Congress government took office, over 3,000 farmers in the state have committed suicide in the past 20 months, yet you show no concern."

"The Governor has rightly pointed out that the existing legal framework can be used to regulate microfinance companies. What is wrong with that? If your government has concerns regarding the Governor's remarks, you should write to him or meet him to clarify your stance. Instead, making unnecessary political attacks and accusing him of being a BJP spokesperson is completely inappropriate," Ashoka stated.

"The entire country is well-aware of how Governors acted when the Congress was in power at the Centre. Rather than making such pointless statements and wasting time, focus on managing your department efficiently. Address the issues faced by farmers and fulfil your duties with sincerity. That is how you can repay the trust of the voters," he charged. "Instead of recklessly making statements in front of the media, please focus a little on managing your department. Do you even remember which department you are in charge of, Mr. Cheluvarayaswamy? You seem to be in a dilemma—whether to align yourself with CM Siddaramaiah's camp or Deputy CM D.K. Shivakumar's," Ashoka claimed."Given your uncertainty about retaining your position in case of a Cabinet reshuffle or a change in the Chief Minister, it is no surprise that you have forgotten your department and responsibilities," he slammed.

# AI tools must not be exploited at humans' expense

An online artificial intelligence-powered chat system for customer service was last week manipulated into composing a poem about how bad that company's customer service is. I am sure many of us have experienced being stuck trying to solve a problem with a banking app or track a delivery that has gone wrong, only to be driven to despair while trying to communicate the problem to an automated virtual customer assistant. This British customer's ability to trick the AI function in a parcel delivery company's online chat system led the company to disable the service. Its chatbot wrote a poem saying that it is "useless at offering help," adding that the company in question is a "waste of time" and a "customer's worst nightmare." The poem ended with the chatbot rejoicing at the company shutting the service down and claiming that, finally, customers "could get the help they needed, from a real person who knew what they were doing."

This light-hearted exchange between chatbot and consumer could only temporarily mask the serious problems people face every day when trying to get a service, some support or simply some help to solve an urgent problem. After pressing the help button, customers are usually only able to ask a limited number of questions related to their inquiry. If they persevere, they might be given a telephone number, but then their call is answered by an interactive voice response system that greets them with endless prompts and automated menus. The whole experience leaves the user feeling powerless and perhaps even close to a nervous breakdown. The



whole experience leaves the user feeling powerless and perhaps even close to a nervous breakdown

And this, we are told, is likely to get worse. Apparently, our world is to witness even greater reliance on digital tools that are being built quickly and tested lightly, without the human experience aspect in mind. Neither do they have the accountability framework to protect their human users from harm or abuse by a glitch in the coding or a bias by the person designing the codes in the first place.

Our world is sleepwalking into yet another crisis that is likely to hit us at some point further down the line, as everyone is racing to embrace the mantra of "saving costs at any cost" and replacing employees with AI-powered chatbots. Based on previous experience, many believe that, if you thought Big Tech was bad, big AI firms are likely to be even worse. Research published last year by the Pew Research Center reported on more than 300 experts trying to forecast the potential harms and threats societies face as a result of the constant, rapid evolution of our digital life. Some 37 percent said they were more concerned than excited about what today's trends say about where digital developments are headed. Meanwhile, 42 percent said they were equally concerned and excited. Only 18 percent were more excited than concerned.

The research also asked these experts to detail some impacts and adversities. Their findings make for a chilling read, since the development of digital systems continues to be driven by profit incentives in economic terms and power incentives in political terms. This will result in tools being used to control the public, such as through surveillance and data harvesting, rather than empowering them to have a smooth experience, act freely, share ideas and protest injuries or injustices. For these experts, surveillance advances, sophisticated bots embedded in civic spaces, the spread of deepfakes, disinformation and facial recognition are all likely to impact human rights. Above all, increasingly sophisticated AI applications are likely to lead to job losses, causing a rise in poverty and the diminishment of human dignity.

Their development continues to be driven by profit incentives in economic terms and power incentives in political terms

What the experts fear most is the loss of the best knowledge in a sea of misinformation and disinformation, as the institutions previously entrusted with informing the public will be further decimated and facts will likely be lost amid rampant bare-faced lies and targeted manipulation. They even argue that "reality itself will be under siege," as emerging digital tools will be able to convincingly create deceptive alternate realities.

Some of the experts also warned about the toll these digital systems are taking on people's health and well-being, as high levels of anxiety and depression are recorded as technology further embeds itself into every aspect of our lives. This increases alienation, loneliness and the potential for a belief in altered realities that could trigger the displacement of jobs and civil strife and endanger social cohesiveness. Experts in the Pew study concerned with governance and human connections fear that norms, standards and regulations will not evolve quickly enough to shield the social and political interactions of citizens. The pace of change could even shake individuals' compass and their trust in each other and in the institutions and modes of governance.

# NFHS-5 data more scientific, reliable than flawed Global Hunger Index: BJP

New Delhi, Feb 8 (TSIT): The National Family Health Survey (NFHS) -5 (2019-21) is more scientific and reliable for assessing India's food security progress than the flawed Global Hunger Index (GHI), which is more trusted by the Congress, said the BJP on Saturday.

In a factsheet, the BJP busted the false claims made by the Congress citing the GHI index that India's position has steadily worsened on the global index to measure hunger. In 2024, India ranked 105th out of 127 countries. "Using the flawed data to question India's food security progress is not only inaccurate but also a deliberate misrepresentation of facts," said the BJP.Experts have discredited the GHI for its flawed methodology, with a 2015 Public Health study warning that it oversimplifies hunger measurement and does not reflect actual food availability. A 2021 Indian Journal of Medical Research (IJMR) study explicitly stated that GHI does not measure hunger at all, but instead relies on indirect indicators like child mortality, which are influenced by multiple factors beyond food access.

"GHI does not assess food intake, production, or distribution, making it an unreliable and misleading indicator of actual hunger levels in India," the BJP said, adding that it relies on an unrepresentative opinion poll of just 3,000 people to assess hunger levels in a country of 1.4 billion. This makes GHI's findings "highly unreliable", the BJP said.

In contrast, NFHS-5, conducted by the Modi Government, surveyed 6.37 lakh households across 707 districts in 28 states and 8 UTs, making it one of the most credible nutrition surveys globally. "Congress ignores this scientifically rigorous dataset and instead amplifies a flawed Western index, distorting India's progress for political gain," the BJP said. It noted that the PM Narendra Modi-led government has made significant strides in improving nutrition levels, with Initiatives like Pradhan Mantri Garib



Kalyan Anna Yojana (PMGKAY) and Poshan Abhiyaan.

"NFHS-5 (2019-21) data shows significant improvements in childhood nutrition, contradicting the misleading narrative pushed by Congress," BJP said.

It showed that stunting in the country has reduced from 38.4 per cent to 35.5 per cent, wasting has declined from 21.0 per cent to 19.3 per cent, and underweight prevalence has dropped from 35.8 per cent to 32.1 per cent, proving steady progress in tackling malnutrition. Notably, the BJP said that "Congress failed to conduct an NFH Survey for an entire decade, raising serious questions about its commitment to addressing India's nutrition challenges". Further, the factsheet also questioned the calculations made in the GHI, which is based on a small sample size of just 3,000 individuals."Some of the countries ranked above India in the 2024 GHI, such as Belarus (ranked 28th) and Bosnia and Herzegovina (ranked 34th), have populations far smaller than India's, and thus face less complexity in tackling hunger. They also benefit from more concentrated resources," the BJP noted.The GHI also places Pakistan, dealing with significant humanitarian crises and food insecurity, higher than India. The factsheet pointed out that the GHI report uses outdated data from global sources such as the World Health Organisation and the Food and Agriculture Organisation (FAO). "India, like many countries, has been undergoing significant improvements in food security through government initiatives such as the National Food Security Act, the Midday Meal Scheme, and public distribution system reforms.

# Neurons & muscles unite: Groundbreaking model paves way for drug marvels

Scientists have developed a groundbreaking two-dimensional model to study neuromuscular diseases, enabling efficient drug testing and enhanced understanding of diseases like spinal muscular atrophy and amyotrophic lateral sclerosis. Researchers have so far identified around 800 different neuromuscular diseases. These conditions are caused by problems in the way muscle cells, motor neurons, and peripheral cells interact. These disorders, including amyotrophic lateral sclerosis and spinal muscular atrophy, lead to muscle weakness, paralysis, and in some cases death.

These diseases are highly complex, and the causes of the dysfunction can vary widely," says Dr. Mina Gouti, head of the Stem Cell Modeling of Development and Disease Lab at the Max Delbrück Center. The problem might lie with the neurons, the muscle cells or the connections between the two. "To better understand the causes and find effective therapies, we need human-specific cell culture models where we can study how motor neurons in the spinal cord interact with the



muscle cells." The researchers working with Gouti had already developed a three-dimensional neuromuscular organoid (NMO) system. "One of our goals is to use our cultures for large-scale drug testing," says Gouti. "The three-dimensional organoids are very large and can't be grown for a long time in the 96 well culture dish that we use to perform high-throughput drug screening studies."For this type of screening, an international team led by Gouti has now developed a self-organizing neuromuscular junction model using pluripotent stem cells. The model contains neurons, muscle cells, and the chemical synapse named neuromuscular junction that is needed for the two types of cells to interact. The researchers have now published their findings in the journal Nature Communications.The 2D self-organizing neuromuscular junction model will allow us to perform high throughput drug screening for different neuromuscular diseases and then study the most promising candidates in patient-specific organoids," says Gouti. Developing the 2D Neuromuscular ModelTo establish the 2D self-organizing neuromuscular junction model, the researchers first had to understand how motor neurons and muscle cells develop in the embryo.

**GEETANJALI CREDIT AND CAPITAL LIMITED**
(CIN- L21012KA1990PLC143422)
2, "Shreedhar Krupa", Shreedhar Tutorials of Commerce, II Main, II Cross, Vidyagiri, Dharwad, Karnataka-580004. • Email id: geetanjalicreditandcapital@gmail.com
Website: www.geetanjalicreditcapital.com • Phone: +91-9314711545

**STATEMENT OF STANDALONE UNAUDITED FINANCIAL RESULTS FOR THE QUARTER ENDED ON 31ST DECEMBER, 2024**

Based on the recommendations of the Audit Committee and the Board of Directors at their respective Meetings held on 07th February, 2025. approved the standalone unaudited financial results for the quarter ended 31st December, 2024 along with Limited Review Report as required under Regulation 33 of SEBI (Listing Obligations & Disclosure Requirements) Regulations, 2015. The result is also available on the websites of the Stock Exchange(s) and the listed entity at https://www.geetanjalicreditcapital.in/financial-result.html

Scan the QR code to view the Financial results on the website of the company

Place : Hubli, Karnataka
Date : 07/02/2025

For and on behalf of
**GEETANJALI CREDIT AND CAPITAL LIMITED**
Sd/- Vitthal Kumar Jajoo
Managing Director (DIN : 03245882)